ಫ್ಯಾಕ್ಸ್ : 080 – 2202 8041 ದೂರವಾಣಿ : 080 – 2202 8032

ಕರ್ನಾಟಕ ಸರ್ಕಾರ

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

ಸಂಖ್ಯೆ : ವಾಇ : ಉ ನಿ : ಸುಮಪ : 2015-16 ದಿನಾಂಕ: 16-01-2016

## ಪತ್ರಿಕಾ ಆಮಂತ್ರಣ

| ಕ್ರಮ ಸಂಖ್ಯೆ | ಕಾರ್ಯಕ್ರಮಗಳ ವಿವರ | ದಿನಾಂಕ ಸಮಯ | ಕಾರ್ಯಕ್ರಮ ನಡೆಯುವ ಸ್ಥಳ |
|---|---|---|---|
| 1 | 0-5 ವರ್ಷದೊಳಗಿನ ಮಕ್ಕಳಿಗೆ ಪಲ್ಸ್ ಪೋಲಿಯೊ ಲಸಿಕೆ ಹಾಕುವ ಮೂಲಕ ಚಾಲನೆ:<br><br>ಶ್ರೀ ಸಿದ್ದರಾಮಯ್ಯ<br>ಮುಖ್ಯಮಂತ್ರಿಗಳು,<br>ಕರ್ನಾಟಕ ಸರ್ಕಾರ<br><br>ಶ್ರೀ ಯು.ಟಿ. ಖಾದರ್,<br>ಆರೋಗ್ಯ ಸಚಿವರು | 17-01-2016<br>ಭಾನುವಾರ<br>ಬೆಳಿಗ್ಗೆ<br>8-00 ಗಂಟೆಗೆ | ಮುಖ್ಯಮಂತ್ರಿಗಳ ಗೃಹ ಕಚೇರಿ,<br>ಕೃಷ್ಣ,<br>ಬೆಂಗಳೂರು |
| 2 | ಬೆಂಗಳೂರು ನಗರ ಮತ್ತು ಸುತ್ತಮುತ್ತಲಿನ ಕೆರೆಗಳ ಒತ್ತುವರಿ ಸಮಗ್ರ ತನಿಖೆ ನಡೆಸಲು ರಚಿಸಲಾಗಿರುವ ವಿಧಾನ ಮಂಡಲದ ಸಮಿತಿಯಿಂದ ಬೆಂಗಳೂರು ನಗರ ಮತ್ತು ಗ್ರಾಮಾಂತರ ಜಿಲ್ಲೆಗಳ ಪ್ರಗತಿ ಪರಿಶೀಲನೆ<br><br>ಅಧ್ಯಕ್ಷತೆ:<br><br>ಶ್ರೀ ಕೆ.ಬಿ. ಕೋಳಿವಾಡ್,<br>ಸದನ ಸಮಿತಿ ಅಧ್ಯಕ್ಷರು | 18-01-2016<br>ಸೋಮವಾರ<br>ಬೆಳಿಗ್ಗೆ<br>11-00 ಗಂಟೆಗೆ | ಕೋರ್ಟ್ ಹಾಲ್, ಮೊದಲ ಮಹಡಿ,<br>ಬೆಂಗಳೂರು ನಗರ ಜಿಲ್ಲಾಧಿಕಾರಿಯವರ ಕಚೇರಿ, ಕೆಂಪೇಗೌಡ ರಸ್ತೆ,<br>ಬೆಂಗಳೂರು |

ನಿರ್ದೇಶಕರ ಪರವಾಗಿ

## ಪತ್ರಿಕಾ ಪ್ರಕಟಣೆ

# ವೃತ್ತಿ ಶಿಕ್ಷಣದಲ್ಲಿ ಕನ್ನಡ ಭಾಷೆ ಅನುಷ್ಠಾನಕ್ಕೆ ಪ್ರಾಮಾಣಿಕ ಪ್ರಯತ್ನ

– ಟಿ.ಬಿ. ಜಯಚಂದ್ರ

ಬೆಂಗಳೂರು, ಜನವರಿ 16 ( ಕರ್ನಾಟಕ ವಾರ್ತೆ ) :

ವೃತ್ತಿ ಶಿಕ್ಷಣದಲ್ಲಿ ಕನ್ನಡ ಭಾಷೆಯನ್ನು ಕಡ್ಡಾಯಗೊಳಿಸುವಂತೆ ಸಮಿತಿಯು ವರದಿ ನೀಡಿದ್ದು, ಈ ಸಂಬಂಧ ವರದಿಯಲ್ಲಿನ ಶಿಫಾರಸ್ಸುಗಳನ್ನು ಉನ್ನತ ಶಿಕ್ಷಣ ಪರಿಷತ್ ಸಭೆಯಲ್ಲಿ ಚರ್ಚಿಸಿ ಆದಷ್ಟು ಶೀಘ್ರವಾಗಿ ಅನುಷ್ಠಾನಗೊಳಿಸುವುದಾಗಿ ಉನ್ನತ ಶಿಕ್ಷಣ ಹಾಗೂ ಕಾನೂನು ಸಚಿವ ಟಿ.ಬಿ. ಜಯಚಂದ್ರ ಅವರು ತಿಳಿಸಿದರು.

ವಿಧಾನಸೌಧದ ಸಮ್ಮೇಳನ ಸಭಾಂಗಣದಲ್ಲಿ ಇಂದು ನಡೆದ ಸಮಾರಂಭದಲ್ಲಿ ವೃತ್ತಿ ಶಿಕ್ಷಣದಲ್ಲಿ ಕಡ್ಡಾಯವಾಗಿ ಕನ್ನಡ ಭಾಷೆಯನ್ನು ಬೋಧಿಸುವ ಬಗೆಗಿನ ಸಮಿತಿಯ ಅಧ್ಯಕ್ಷರಾದ ಹಂಪೆ ಕನ್ನಡ ವಿಶ್ವವಿದ್ಯಾಲಯದ ವಿಶ್ರಾಂತ ಕುಲಪತಿ ಡಾ. ಹಿ.ಚಿ. ಬೋರಲಿಂಗಯ್ಯ ಅವರಿಂದ ವರದಿಯನ್ನು ಸ್ವೀಕರಿಸಿ ಪ್ರಕ್ರಿಯೇ ಈಗಾಗಲೇ ವಿಳಂಬವ ಆಗಿದೆ. ಇನ್ನೂ ವಿಳಂಬವಾಗದಂತೆ ಸರ್ಕಾರ ಜಾಗ್ರತೆವಹಿಸಿ ಸಮಿತಿಯ ಶಿಫಾರಸ್ಸುಗಳನ್ನು ಜಾರಿಗೆ ತರಲು ಪ್ರಾಮಾಣಿಕ ಕ್ರಮಕ್ಕೆ ಮಾಡಲಾಗುವುದು ಎಂದರು.

ಸಮಿತಿ ನೀಡಿರುವ ವರದಿಯನ್ನು ಈಗ ಸ್ವೀಕರಿಸಲಾಗಿದ್ದು ವೃತ್ತಿ ಶಿಕ್ಷಣಕ್ಕೆ ಸಂಬಂಧಿಸಿದಂತೆ ಪಠ್ಯವನ್ನು ತಯಾರಿಸಬೇಕಾಗುತ್ತದೆ. ವಿಶ್ವವಿದ್ಯಾಲಯಗಳ ಕುಲಪತಿಗಳು ಪಠ್ಯ ಪುಸ್ತಕ ತಯಾರು ಮಾಡಲು ಪೂರ್ವಭಾವಿ ತಯಾರಿಗಳನ್ನು ಮಾಡಿಕೊಳ್ಳಲು ಕಾಲಾವಕಾಶ ಬೇಕಾಗುತ್ತದೆ ಎಂದ ಉನ್ನತ ಶಿಕ್ಷಣ ಸಚಿವ ಟ.ಬಿ. ಜಯಚಂದ್ರ ಅವರು ವಿದ್ಯಾರ್ಥಿಗಳಿಗೆ ಅನಾನುಕೂಲವಾಗುವಂತೆ ಪಠ್ಯವನ್ನು ತಯಾರಿಸಿ ವೃತ್ತಿ ಶಿಕ್ಷಣದಲ್ಲಿ ಕನ್ನಡ ಭಾಷೆಯನ್ನು ಕಡ್ಡಾಯಗೊಳಿಸಲು ಸರ್ಕಾರ ಎಲ್ಲಾ ರೀತಿಯ ಕ್ರಮ ಕೈಗೊಳ್ಳಲಿದೆ ಎಂದು ತಿಳಿಸಿದರು.

ವರದಿಯನ್ನು ಹಸ್ತಾಂತರಿಸಿ ಮಾತನಾಡಿದ ಸಮಿತಿಯ ಅಧ್ಯಕ್ಷ ಡಾ ಹಿ.ಚಿ. ಬೋರಲಿಂಗಯ್ಯ ಅವರು ಎಲ್ಲಾ ವಿಶ್ವ ವಿದ್ಯಾಲಯಗಳೂ ವೃತ್ತಿ ಶಿಕ್ಷಣದಲ್ಲಿ ಕನ್ನಡ ಕಲಿಸಲು ಆಸಕ್ತಿವಹಿಸಿದ್ದು, ಈ ಸಂಬಂಧ ಸರ್ಕಾರ ಸುತ್ತೋಲೆ ಹೊರಡಿಸಬೇಕು ಎಂದರು.

ಪದವಿ ಕಾಲೇಜುಗಳಲ್ಲಿ ಇಂಗ್ಲೀಷ್ ಭಾಷೆಯನ್ನು ಕಡ್ಡಾಯಗೊಳಿಸಲಾಗಿದೆ. ಆದರೆ ಕನ್ನಡ ಭಾಷೆಯ ಬದಲು ಬೇರೆ ಭಾಷೆ ಕಲಿಯುವ ಅವಕಾಶ ಕಲ್ಪಿಸಲಾಗಿದೆ. ಇದು ಸರಿಯಲ್ಲ ಎಂದ ಡಾ. ಹಿ.ಚಿ. ಬೋರಲಿಂಗಯ್ಯ ಅವರು ಕನ್ನಡ ಭಾಷೆಯನ್ನು ಕಡ್ಡಾಯಗೊಳಿಸುವಂತೆ ಸಮಿತಿಯು ಶಿಫಾರಸ್ಸು ಮಾಡಿದೆ ಎಂದರು.

ಪ್ರಜಾಪ್ರಭುತ್ವದಲ್ಲಿ ಜನ ಭಾಷೆಗೆ ಎಲ್ಲಾ ರೀತಿಯ ಅವಕಾಶ ಕಲ್ಪಿಸಬೇಕು . ಜನಭಾಷೆ ಕಲಿಯದೆ ಜನರ ಭಾವನೆಗಳನ್ನು ಅರಿಯಲು ಸಾಧ್ಯವಿಲ್ಲ ಎಂದು ಇದೇ ಸಂದರ್ಭದಲ್ಲಿ ಡಾ. ಹಿ.ಚಿ. ಬೋರಲಿಂಗಯ್ಯ ಅವರು ಮಾತನಾಡಿದರು.

ವೃತ್ತಿ ಶಿಕ್ಷಣ ತರಗತಿಗಳಲ್ಲಿ ಕನ್ನಡ ಭಾಷೆ ಕಲಿಕೆಯ ಪ್ರಯತ್ನಗಳು ಈ ಹಿಂದಿನಿಂದಲು ನಡೆದಿದ್ದವು. ಆದರೆ ಪರೀಕ್ಷೆಗಳನ್ನು ಕಡ್ಡಾಯ ಮಾಡದ ಕಾರಣ ಆ ಕಾರ್ಯ ಯಶಸ್ವಿಯಾಗಲಿಲ್ಲ ಎಂದು ಮಾತನಾಡಿದ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಡಾ. ಎಲ್. ಹನುಮಂತಯ್ಯ ಅವರು ಇನ್ನು ಮುಂದೆ ಕನ್ನಡ ಭಾಷಾ ಪರೀಕ್ಷೆಯನ್ನು ಕಡ್ಡಾಯಗೊಳಿಸಿದಲ್ಲಿ ಮಾತ್ರ ಕನ್ನಡ ಭಾಷೆಯನ್ನು ಉಳಿಸಿದಂತಾಗುತ್ತದೆ ಎಂದರು.

ಕನ್ನಡ ಭಾಷೆ ಬರುವ ವಿದ್ಯಾರ್ಥಿಗಳಿಗೆ ಎರಡು ಸೆಮಿಸ್ಟರ್‌ಗಳಲ್ಲಿ ಕನ್ನಡ ಭಾಷೆ ಕಲಿಸಬೇಕು. ಕನ್ನಡ ಬಾರದ ವಿದ್ಯಾರ್ಥಿಗಳಿಗೆ ಕನ್ನಡದ ವರ್ಣಮಾಲೆ ಹಾಗೂ ವ್ಯವಹಾರಿಕ ಕನ್ನಡ ಭಾಷೆಯನ್ನು ಕಲಿಸಬೇಕು ಎಂದು ಮಾತನಾಡಿದ ಡಾ. ಎಲ್. ಹನುಮಂತಯ್ಯ ಅವರು ಕನ್ನಡದ ಪರ ಅಪಾರ ಕಳಕಳಿ ಹೊಂದಿರುವ ನಮ್ಮ ಸರ್ಕಾರ ಸಮಿತಿ ನೀಡಿರುವ ಎಲ್ಲಾ ಶಿಫಾರಸ್ಸುಗಳನ್ನು ಅನುಷ್ಠಾನಕ್ಕೆ ತರುತ್ತದೆ ಎಂಬ ವಿಶ್ವಾಸ ನಮಗಿದೆ ಎಂದರು.

ಉನ್ನತ ಶಿಕ್ಷಣ ಇಲಾಖೆಯ ಅಪರ ಮುಖ್ಯ ಕಾರ್ಯದರ್ಶಿಗಳಾದ ಶ್ರೀ ಭರತ್‌ಲಾಲ್ ಮೀನಾ ಸಮಿತಿಯ ಸದಸ್ಯರು ಹಾಗೂ ಪ್ರಾಧಿಕಾರದ ಕಾರ್ಯದರ್ಶಿ ಮುರುಳೀಧರ್ ಅವರು ಸಮಾರಂಭದಲ್ಲಿ ಉಪಸ್ಥಿತರಿದ್ದರು.

ಬಾಬು:ಜಿಪಿಆರ್.

## ಸಚಿವ ಸಂಪುಟದ ಸಭೆ

ಬೆಂಗಳೂರು, ಜನವರಿ 16 ( ಕರ್ನಾಟಕ ವಾರ್ತೆ ) :

ರಾಜ್ಯ ಸಚಿವ ಸಂಪುಟದ ಸಭೆಯು ಜನವರಿ 20 ರ ಬುಧವಾರ ಬೆಳಿಗ್ಗೆ 11-00 ಗಂಟೆಗೆ ವಿಧಾನ ಸೌಧ ಮೂರನೇ ಮಹಡಿಯಲ್ಲಿರುವ ಸಚಿವ ಸಂಪುಟದ ಸಭಾ ಮಂದಿರದಲ್ಲಿ ನಡೆಯಲಿದೆ.

ಬಾಬು/ಕೆಎಂ

## ಗ್ರಾಹಕರ ಜಾಗೃತಿ ಮತ್ತು ಸಂರಕ್ಷಣೆ ಸರ್ಕಾರದ ಗುರಿ

ಬೆಂಗಳೂರು, ಜನವರಿ 16 ( ಕರ್ನಾಟಕ ವಾರ್ತೆ ) :

ಗ್ರಾಹಕರು ಎದುರಿಸುತ್ತಿರುವ ನಾನಾ ರೀತಿಯ ಸಮಸ್ಯೆಗಳಲ್ಲಿ ಹಾದಿ ತಪ್ಪಿಸುವ ಜಾಹೀರಾತುಗಳು ಒಂದು. ಜಾಹೀರಾತುಗಳಲ್ಲಿ ಕೆಲವೊಂದು ಹೊರತುಪಡಿಸಿದರೆ ಉಳಿದೆಲ್ಲವು ಹಾದಿ ತಪ್ಪಿಸುವ ಕುತಂತ್ರವಾಗಿರುತ್ತದೆ. ಸುಳ್ಳು ಭರವಸೆ ನೀಡುವುದು ಸರಕುಗಳ ಬಗ್ಗೆ ತಪ್ಪು ಮಾಹಿತಿ ನೀಡುವುದು ಸರ್ವೆ ಸಾಮಾನ್ಯ ವಿಷಯವಾಗಿದೆ. ಬಳಕೆದಾರರು ಎಷ್ಟೇ ಜಾಗೃತವಾಗಿದ್ದರೂ ಕೆಲವೊಂದು ಸಂದರ್ಭದಲ್ಲಿ ಜಾಹೀರಾತುಗಳ ಮೂಲಕ ಮೋಸ ಹೋಗುತ್ತಾರೆ. ಇದರಿಂದ ನೋವು ನಷ್ಟ ಮತ್ತು ಕೆಲವು ಸಾವು ಸಂಭವಿಸುವ ಪ್ರಕರಣಗಳೂ ನಡೆದಿವೆ. ಈ ರೀತಿ ಜಾಹೀರಾತುಗಳ ಮೂಲಕ ಬಳಕೆದಾರರು ವಂಚಿಸುವುದನ್ನು ನಿಯಂತ್ರಿಸಲು ಕೇಂದ್ರ ಸರ್ಕಾರದ ಗ್ರಾಹಕ ವ್ಯವಹಾರಗಳ ಇಲಾಖೆ ಕಾಯ್ದೆಗಳನ್ನು ರೂಪಿಸಿದೆ ಎಂದು ಗ್ರಾಹಕ ವ್ಯವಹಾರಗಳ, ಆಹಾರ ಮತ್ತು ನಾಗರೀಕ ಸರಬರಾಜು ಸಚಿವ ಶ್ರೀ ರಾಮ್ ವಿಲಾಸ್ ಪಾಸ್ವಾನ್ ಅವರು ತಿಳಿಸಿದರು.

ಅವರು ಇಂದು ನಗರದ ಕ್ಯಾಪಿಟಲ್ ಹೋಟೆಲ್‌ನಲ್ಲಿ ಆಯೋಜಿಸಲಾಗಿದ್ದ ದಕ್ಷಿಣ ಪ್ರಾದೇಶಿಕ ಸಮಾಲೋಚನ ಸಭೆಯನ್ನು ಉದ್ದೇಶಿಸಿ ಮಾತನಾಡುತ್ತಾ, ಕೇಂದ್ರ ಸರ್ಕಾರದ ಗ್ರಾಹಕ ವ್ಯವಹಾರಗಳ ಇಲಾಖೆಯು ಜಾಹೀರಾತುಗಳು ದಾರಿತಪ್ಪಿಸುತ್ತಿರುವ ಬಗ್ಗೆ ಕುಂದುಕೊರತೆ ವಿಭಾಗವು ಅವುಗಳ ವಿರುದ್ಧನ ವೆಬ್‌ಪೋರ್ಟಲ್ ಒಂದನ್ನು ಆರಂಭಿಸಿದೆ ಎಂದರು.

ನಾವೆಲ್ಲರೂ ಒಂದಲ್ಲ ಮತ್ತೊಂದು ರೀತಿಯಲ್ಲಿ ಗ್ರಾಹಕರು ಹುಟ್ಟಿದಾಗಿನಿಂದಲೂ ಆಹಾರ, ನೀರು ಇತ್ಯಾದಿ ಪದಾರ್ಥಗಳನ್ನು ಸೇವಿಸುತ್ತಲೇ ಬಂದಿದ್ದೇವೆ. ನಾವು ಜೀವಂತವಾಗಿರುವುದಕ್ಕೆ ಆಹಾರ ಎಷ್ಟು ಮುಖ್ಯವೋ ಅದೇ ರೀತಿ ಆರೋಗ್ಯದಿಂದ ಬಾಳನ್ನು ಸಾಗಿಸಬೇಕಾದರೆ ಔಷಧಿಯೂ ಅಷ್ಟೇ ಅಗತ್ಯ. ಇದಲ್ಲದೆ ನಮ್ಮ ಜೀವನಕ್ಕಾಗಿ ಇತರೆ ವಸ್ತುಗಳನ್ನು ಬಳಸಲು ಮಾರುಕಟ್ಟೆಯನ್ನು ಅವಲಂಬಿಸಿದ್ದೇವೆ. ನಮ್ಮ ಅಗತ್ಯತೆಗಳನ್ನು ಉತ್ಪಾದಿಸಲು ಸರಬರಾಜು ಮಾಡಲೆಂದೇ ಮಾರುಕಟ್ಟೆಗಳು ಹುಟ್ಟಿಕೊಂಡಿವೆ. ಮಾರುಕಟ್ಟೆಗಳು ಗ್ರಾಹಕರ ಹಿತರಕ್ಷಣೆಗೊಸ್ಕರ ಸರಿಯಾದ ತೂಕ, ನ್ಯಾಯಯುತವಾದ ಬೆಲೆ ಮತ್ತು ಗುಣಮಟ್ಟದಂತಹ ವಸ್ತುಗಳನ್ನು ಗ್ರಾಹಕರಿಗೆ ನೀಡಬೇಕು ಎಂದು ತಿಳಿಸಿದರು.

ಮಾರುಕಟ್ಟೆಯಲ್ಲಿ ದಿನನಿತ್ಯದ ಸರಕುಗಳನ್ನು ಖರೀದಿಸುವಾಗ ಗ್ರಾಹಕರು ಸಾಮಾನ್ಯವಾಗಿ ಎಲ್ಲವು ಸರಿಯಾಗಿದೆ ಎಂದು ಭಾವಿಸುತ್ತಾರೆ. ಅದು ಸರಕಿನ ತೂಕವಿರಲಿ ಅಥವಾ ಅಳತೆಯಿರಲಿ ಮಾರಾಟಗಾರರು ನೀಡುವುದನ್ನು ಪ್ರಶ್ನಿಸುವುದಿಲ್ಲ. ಆ ರೀತಿ ಮಾಡದೇ ಗ್ರಾಹಕರು ತೂಕ, ಅಳತೆ ಮತ್ತು ಗುಣಮಟ್ಟವನ್ನು ಪ್ರಶ್ನಿಸುವ ಹಕ್ಕು ಚಲಾಯಿಸಬೇಕು ಎಂದು ರಾಜ್ಯ ಆಹಾರ ಮತ್ತು ನಾಗರೀಕ ಸರಬರಾಜು ಖಾತೆ ಸಚಿವ ಶ್ರೀ ದಿನೇಶ್ ಗುಂಡೂರಾವ್ ಅವರು ತಿಳಿಸಿದರು.

ಎಲ್ಲಾ ತೂಕ ಮತ್ತು ಅಳತೆ ಸಾಧನೆಗಳಿಗೆ ಇಲಾಖೆಯು ಹಾಕಿರುವ ಮುದ್ರೆ ಇದೆ ಎಂದು ಖಾತ್ರಿಪಡಿಸಿಕೊಳ್ಳಿ. ಮರದ ತಕ್ಕಡಿ ಅಥವಾ ಪಾಕೆಟ್ ಸ್ಪ್ರಿಂಗ್ ಬ್ಯಾಲೆನ್ಸ್‌ಗಳನ್ನು ಉಪಯೋಗಿಸುವುದು ಕಾನೂನು ಬಾಹಿರ. ಬೆಲೆಯನ್ನು ತಿದ್ದುವುದು ಅಥವಾ ಅದರ ಮೇಲೆ ಸ್ಟಿಕರ್ ಅಂಟಿಸುವುದು ಅಪರಾಧ. ಈ ರೀತಿ ಗ್ರಾಹಕರಿಗೆ ಕೆಲವು ವ್ಯಾಪಾರಸ್ಥರು ಮೋಸ ಮಾಡುತ್ತಾರೆ. ಆದ್ದರಿಂದ ಗ್ರಾಹಕರು ಹೆಚ್ಚು ಜಾಗೃತವಾಗಿರಬೇಕು ಎಂದರು.

ಗ್ರಾಹಕರು ವ್ಯಾಪಾರಸ್ಥರಿಂದ ಮೋಸ ಹೋದ ಸಂದರ್ಭದಲ್ಲಿ ದೂರು ದಾಖಲಿಸಲು ಯಾವುದೇ ರೀತಿ ಶುಲ್ಕ ಪಾವತಿಸದೆ http://gama.gov.in ವೆಬ್‌ಸೈಟ್‌ನಲ್ಲಾಗಲಿ, ನಿಮ್ಮ ಹತ್ತಿರದ ಗ್ರಾಹಕ ಸುವಿದಾ ಕೇಂದ್ರದಲ್ಲಿ ಅಥವಾ ಸರ್ಕಾರ ಗೊತ್ತುಪಡಿಸಿರುವ ಸ್ವಯಂ ಸೇವಾ ಗ್ರಾಹಕ ಸಂಸ್ಥೆಗೆ ಅಥವಾ ಜಿಲ್ಲಾ ಗ್ರಾಹಕ ಮಾಹಿತಿ ಕೇಂದ್ರದಲ್ಲಿ ದೂರು ದಾಖಲಿಸಬಹುದು.

ಈ ಕಾರ್ಯಕ್ರಮದಲ್ಲಿ ಕೇಂದ್ರ ಸರ್ಕಾರದ ಆಹಾರ ಮತ್ತು ನಾಗರೀಕ ಸರಬರಾಜು ಇಲಾಖಾ ವಿಶೇಷ ಕಾರ್ಯದರ್ಶಿ ಗುರುಚರಣ್, ರಾಜ್ಯ ಸರ್ಕಾರದ ಆಹಾರ ಮತ್ತು ನಾಗರೀಕ ಸರಬರಾಜು ಇಲಾಖಾ ಪ್ರಧಾನ ಕಾರ್ಯದರ್ಶಿ ಡಾ: ಕಲ್ಪನಾ, ಕೇರಳ, ತಮಿಳುನಾಡು, ಪುದುಚೇರಿ, ಆಂಧ್ರಪ್ರದೇಶ, ತೆಲಂಗಾಣ ಮತ್ತು ಲಕ್ಷದೀಪದ ಹಲವಾರು ಹಿರಿಯ ಅಧಿಕಾರಿಗಳು ಭಾಗವಹಿಸಿದ್ದರು.
ಕೆವಿವಿ

# ಜ. 25 ರಂದು ಮತದಾರರ ದಿನ ಆಚರಣೆಗೆ ನಿರ್ಧಾರ

**ಬೆಂಗಳೂರು, ಜನವರಿ 16 (ಕರ್ನಾಟಕ ವಾರ್ತೆ)**

ಕೇಂದ್ರ ಚುನಾವಣಾ ಆಯೋಗದ ಸೂಚನೆಯಂತೆ ಪ್ರತಿ ವರ್ಷದಂತೆ ಈ ವರ್ಷವೂ ಜನವರಿ 25 ರಂದು ಮತದಾರರ ದಿನವನ್ನು ಆಚರಿಸಲು ತೀರ್ಮಾನಿಸಲಾಗಿದೆ ಎಂದು ರಾಜ್ಯ ಮುಖ್ಯ ಚುನಾವಣಾಧಿಕಾರಿ ಶ್ರೀ ಅನಿಲ್ ಕುಮಾರ್ ಝಾ ಅವರು ಇಂದು ತಿಳಿಸಿದರು.

ಅವರು ಇಂದು ಬೆಂಗಳೂರಿನ ರಾಜ್ಯ ಮುಖ್ಯ ಚುನಾವಣಾಧಿಕಾರಿಗಳ ಕಚೇರಿ "ನಿರ್ವಚನಾ ಸದನ್" ನಲ್ಲಿ ಮತದಾರರ ದಿನ ಆಚರಣೆ ಕುರಿತಂತೆ ನಡೆದ ಪೂರ್ವಭಾವಿ ಸಭೆಯಲ್ಲಿ ಮಾತನಾಡುತ್ತಿದ್ದರು.

ಅದೇ ದಿನ ರಾಜ್ಯದ ಎಲ್ಲ ಜಿಲ್ಲೆಗಳಲ್ಲೂ ಜಿಲ್ಲಾ ಚುನಾವಣಾಧಿಕಾರಿಗಳೂ ಆದಂತಹ ಜಿಲ್ಲಾಧಿಕಾರಿಗಳ ನೇತೃತ್ವದಲ್ಲಿ ಮತದಾರರ ದಿನ ಆಚರಿಸಲಾಗುವುದು. ಅಂದು ಮತದಾನದ ಮಹತ್ವ, ಮತದಾರರ ಜಾಗೃತಿ ಕುರಿತಂತೆ ಸಮಾರಂಭದಲ್ಲಿ ಕಾರ್ಯಕ್ರಮ ಹಮ್ಮಿಕೊಳ್ಳಲು ಉದ್ದೇಶಿಸಲಾಗಿದೆ ಎಂದು ಅವರು ಸಭೆಗೆ ತಿಳಿಸಿದರು.

ಜನವರಿ 25 ರಂದು ಬೆಂಗಳೂರಿನ ಪುರಭವನದಲ್ಲಿ ನಡೆಯುವ ಮುಖ್ಯ ಸಮಾರಂಭದಲ್ಲಿ ರಾಜ್ಯದ ರಾಜ್ಯಪಾಲರ ನೇತೃತ್ವದಲ್ಲಿ ಕಾರ್ಯಕ್ರಮ ಆಯೋಜಿಸಲು ತೀರ್ಮಾನಿಸಲಾಗುವುದು. ಸಮಾರಂಭದ ದಿನದಂದು ಯುವ ಮತದಾರರಿಗೆ ಚುನಾವಣಾ ಗುರುತಿನ ಚೀಟಿ ನೀಡಲು ಆಯೋಜಿಸಲಾಗಿದೆ.

ಬಾಬು/ಪಿಇ/ಕೆಎಂ

## ಸ್ವಾಮಿ ವಿವೇಕಾನಂದರ ಜನ್ಮ ದಿನಾಚರಣೆ:

## ರಾಷ್ಟ್ರೀಯ ಯುವ ದಿನಾಚರಣೆ ಸಪ್ತಾಹದ ಕಾರ್ಯಕ್ರಮಗಳು

**ಬೆಂಗಳೂರು, ಜನವರಿ 16, 2016 (ಕರ್ನಾಟಕ ವಾರ್ತೆ)**

ಸ್ವಾಮಿ ವಿವೇಕಾನಂದರ ಜನ್ಮ ದಿನಾಚರಣೆಯ ಅಂಗವಾಗಿ ರಾಜ್ಯ ಸರ್ಕಾರವು ಆದೇಶದಲ್ಲಿ ತಿಳಿಸಿರುವ ರಾಷ್ಟ್ರೀಯ ಯುವ ದಿನಾಚರಣೆ ಸಪ್ತಾಹದ ಕಾರ್ಯಕ್ರಮಗಳ ಮಾರ್ಗಸೂಚಿಗಳು ಇಂತಿವೆ.

ಜನವರಿ 17 ರಂದು ದೈಹಿಕ ದೃಢತೆ ಅಂಗವಾಗಿ ಗ್ರಾಮೀಣ ಕ್ರೀಡೆ, ವಿಶೇಷ ಕ್ರೀಡೆಗೆ ಪ್ರೋತ್ಸಾಹ ನೀಡುವುದು. ಸಾಹಸ ಕ್ರೀಡೆಗಳಿಗೆ ಸಂಬಂಧಿಸಿದ ಕಾರ್ಯಕ್ರಮಗಳನ್ನು ಏರ್ಪಡಿಸುವುದು.

ಜನವರಿ 18 ರಂದು ಶಾಂತಿಗಾಗಿ ಯುವಜನತೆ ದಿನ ಆಚರಿಸಲು ದೇಶದಲ್ಲಿ ನೆಲೆಸಲು ಸಮಾವೇಶ ಹಾಗೂ ಚರ್ಚೆಗಳನ್ನು ಆಯೋಜಿಸುವುದು. ಕ್ರೀಡೆಗಳ ಆಯೋಜನೆ ಮಾಡುವುದು.

ಜನವರಿ 19 ರಂದು ಕೌಶಲ್ಯ ಅಭಿವೃದ್ಧಿ ನಿಮಿತ್ತ ಯುವಜನರು ತಯಾರಿಸಿದ ಕೌಶಲ್ಯ ಅಭಿವೃದ್ಧಿ ವಸ್ತುಗಳ ವಸ್ತು ಪ್ರದರ್ಶನ ಏರ್ಪಡಿಸುವುದು, ಹೊಸ ವಿಷಯಗಳ ತರಬೇತಿಯನ್ನು ಪ್ರಾರಂಭಿಸುವುದು, ಸರ್ಕಾರದ ಯುವ ಕಾರ್ಯಕ್ರಮಗಳ ವಿವರಗಳನ್ನು ಯುವಜನತೆಗೆ ತಲುಪಿಸುವುದು ಮತ್ತು ರಾಷ್ಟ್ರೀಯ ಯುವ ಸಪ್ತಾಹದ ಕ್ರೋಢಿಕರಣ ಮಾಡುವುದು.

ರಾಜ್ಯದ ಸರ್ಕಾರದ ಆದೇಶದಲ್ಲಿ ಮೇಲೆ ಕಾಣಿಸಿದ ಎಲ್ಲಾ ಕಾರ್ಯಕ್ರಮಗಳನ್ನು ರಾಜ್ಯದ ಎಲ್ಲಾ ವಿಶ್ವವಿದ್ಯಾನಿಲಯಗಳು, ಕಾಲೇಜು ಶಿಕ್ಷಣ ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ ಹಾಗೂ ಪದವಿಪೂರ್ವ ಶಿಕ್ಷಣ ಇಲಾಖೆಯ ಎಲ್ಲಾ ಸರ್ಕಾರಿ, ಖಾಸಗಿ ಅನುದಾನಿತ ಹಾಗೂ ಖಾಸಗಿ ಅನುದಾನರಹಿತ ಪದವಿ ಕಾಲೇಜುಗಳು, ಇಂಜಿನಿಯರಿಂಗ್ ಕಾಲೇಜುಗಳು, ಪಾಲಿಟೆಕ್ನಿಕ್ ಕಾಲೇಜುಗಳು ಹಾಗೂ ಪದವಿಪೂರ್ವ ಕಾಲೇಜುಗಳಲ್ಲಿ ಜನವರಿ 19 ರವರೆಗೆ "ರಾಷ್ಟ್ರೀಯ ಯುವ ದಿನಾಚರಣೆಯ ಸಪ್ತಾಹ" ವನ್ನಾಗಿ ಆಚರಿಸುವುದು.

ಮಾರ್ಗಸೂಚಿಗಳ ಅನುಸಾರ ವಿವೇಕಾನಂದರ ಜನ್ಮ ದಿನಾಚರಣೆಯನ್ನು ಅರ್ಥಪೂರ್ಣವಾಗಿ ಪ್ರತಿ ವರ್ಷ ತಪ್ಪದೇ ಕಡ್ಡಾಯವಾಗಿ ಆಚರಿಸಲು ಸರ್ಕಾರ ಆದೇಶ ಹೊರಡಿಸಿದೆ.

ಬಾಬು/ಕೆಎಂ

## ವಾರ್ತಾ ವಿಶೇಷ:

# ಮಾನವ ಅಭಿವೃದ್ಧಿ – ಕರ್ನಾಟಕ ರಾಜ್ಯದ ಗ್ರಾಮ ಪಂಚಾಯತಿಗಳ ಸಾಧನೆ

ಸಂಯುಕ್ತ ರಾಷ್ಟ್ರಗಳ ಅಭಿವೃದ್ಧಿ ಕಾರ್ಯಕ್ರಮ 1990 ರಲ್ಲಿ ಮಾನವ ಅಭಿವೃದ್ಧಿ ವರದಿಯನ್ನು ಪ್ರಕಟಿಸಿದಾಗಿನಿಂದ, ಅಭಿವೃದ್ಧಿ ಸಿದ್ಧಾಂತದ ಆಚರಣೆ, ನೀತಿಗಳ ಚಿತ್ರಣ ಮತ್ತು ಅಭಿವೃದ್ಧಿಯನ್ನು ಅಳಿಯುವ ಮಾನದಂಡಗಳಲ್ಲಿಯೂ ವ್ಯಾಪಕವಾದ ಬದಲಾವಣೆಗಳು ಕಂಡುಬಂದವು. ಮಾನವ ಅಭಿವೃದ್ಧಿಯು ಜೀವನದ ಗುಣಮಟ್ಟ ಸುಧಾರಣೆಯ ಒಂದು ಪ್ರಮುಖ ಮಾರ್ಗವಾಗಿ ಹೊರಹೊಮ್ಮುವುದಕ್ಕಿಂತ ಮೊದಲು ಅಭಿವೃದ್ಧಿಯ ಮುಖ್ಯ ಗಮನ ಕೇವಲ ಆದಾಯ ಅಥವಾ ಉತ್ಪನ್ನವನ್ನು ವೃದ್ಧಿಸುವುದರ ಕಡೆಗಿತ್ತು. ಆ ಮೂಲಕ ಆರ್ಥಿಕ ಬೆಳವಣಿಗೆಯ ಫಲಶೃತಿಗಳು ಮತ್ತು ಸಾಮಾಜಿಕ ನ್ಯಾಯ ಎಲ್ಲರಿಗೂ ತಲುಪತ್ತವೆಂದು ಪರಿಭಾವಿಸಲಾಗಿತ್ತು.

1970 ರ ದಶಕದವರೆಗೆ 'ಮೇಲಿನಿಂದ ಹರಿದುಬಂದ ಸಿದ್ಧಾಂತ' ವನ್ನಾಧರಿಸಿ ರಚಿತವಾದ 'ಆರ್ಥಿಕ ಬೆಳವಣಿಗೆಯ" ಮಾದರಿಯು ಕೇವಲ ರಾಷ್ಟ್ರದ ಉತ್ಪನ್ನ, ಉಳಿತಾಯ, ಬಂಡವಾಳ ಹೆಚ್ಚಳಕ್ಕೆ ಮಾತ್ರ ಆದ್ಯತೆ ನೀಡಲಾಗಿತ್ತು. ಇದರ ಪ್ರಕಾರ ರಾಷ್ಟ್ರ ಆದಾಯ ಅಥವಾ ಉತ್ಪಾದಕತೆಯಲ್ಲಿನ ಹೆಚ್ಚಳದಿಂದ ಸಾಮಾನ್ಯ ಜನರ, ಅದರಲ್ಲೂ ವಿಶೇಷವಾಗಿ ಸಮಾಜದ ದುರ್ಬಲ ವರ್ಗದವರ ಜೀವನದ ಗುಣಮಟ್ಟದಲ್ಲಿ ಸಾಕಷ್ಟು ಸುಧಾರಣೆಯಾಗುತ್ತದೆಂದು ನಂಬಲಾಗಿತ್ತು. ಆದರೆ, ಆರ್ಥಿಕ ಬೆಳವಣಿಗೆಯ ದರಗಳು ಅಧಿಕವಾಗುತ್ತಿದ್ದರೂ ಬಡತನ, ಸಾಮಾಜಿಕ ಹೊರತಳ್ಳುವಿಕೆ, ಲಿಂಗ ತಾರತಮ್ಮ ಹಾಗೂ ಅಪರಾಧ ಮುಂತಾದ ಸಂಕಷ್ಟಗಳು ವ್ಯಾಪಕವಾಗಿ ಹಾಗೂ ನಿರಂತರವಾಗಿ ವಿವಿಧ ಸಮಾಜಗಳಲ್ಲಿ ಮುಂದುವರಿದಿರುವುದು ಕಂಡುಬರುತ್ತದೆ.

ಮಾನವ ಅಭಿವೃದ್ಧಿಯು ಹಲವಾರು ಅಂಶಗಳಿಂದ ನಿರ್ಧರಿಸಲ್ಪಡುವ ಒಂದು ಸಂಗತಿಯಾಗಿದೆ. ಅದು ಜೀವನದ ಹಲವು ಮುಖಗಳನ್ನು ಹೊಂದಿದೆ. ಮಾನವ ಅಭಿವೃದ್ಧಿ ಎಂಬುದು ಮಾನವ ಅಭಿವೃಧಿ ಸೂಚ್ಯಂಕಕ್ಕಿಂತ ವಿಶಾಲವಾಗಿದೆ. ಮಾನವ ಅಭಿವೃದ್ಧಿಯಲ್ಲಿ ಗೌರವಯುತ ಜೀವನ ಮಟ್ಟ, ಆರೋಗ್ಯ ಪೂರ್ಣ ಜೀವನ ಹಾಗೂ ಜ್ಞಾನ ಸಂಪಾದನೆ ಇವು ಪ್ರಮುಖ ಆಯ್ಕೆಗಳಾಗಿವೆ. ಮಾನವ ಅಭಿವೃದ್ಧಿಯನ್ನು ನಿರ್ಧರಿಸುವಲ್ಲಿ ಹಲವಾರು ಅಂಶಗಳಿದ್ದು, ಇವು ಒಂದಕ್ಕೊಂದು ನೇರವಾದ ಸಂಬಂಧವನ್ನು ಹೊಂದಿ, ಪರಸ್ಪರ ಬಲಪಡಿಸುವುದಾಗಿದೆ.

## ಮಾನವ ಅಭಿವೃದ್ಧಿ ವರದಿ:

ಸಂಯುಕ್ತ ರಾಷ್ಟ್ರಗಳ ಅಭಿವೃದ್ಧಿ ಕಾರ್ಯಕ್ರಮ ಅಧ್ಯಯನ ವಿಧಾನವನ್ನು ಅನುಸರಿಸಿ ಭಾರತ ಸರ್ಕಾರದ ಯೋಜನಾ ಆಯೋಗವು 2001 ರಲ್ಲಿ ಪ್ರಪ್ರಥಮ ಬಾರಿಗೆ ರಾಷ್ಟ್ರೀಯ ಮಾನವ ಅಭಿವೃದ್ಧಿ ವರದಿಯನ್ನು ಪ್ರಕಟಿಸಿದೆ. ಅದೇ ರೀತಿ 2011 ರಲ್ಲಿ ಭಾರತ ಮಾನವ ಅಭಿವೃದ್ಧಿ ವರದಿಯನ್ನು ಪ್ರಕಟಿಸಿದೆ.

ಭಾರತದಲ್ಲಿ ರಾಜ್ಯ ಸರ್ಕಾರಗಳು ಮಾನವ ಅಭಿವೃದ್ಧಿ ವರದಿಗಳ ಪ್ರಕಟಣೆಯನ್ನು 1995 ರಲ್ಲಿ ಮಧ್ಯಪ್ರದೇಶ ಮಾನವ ಅಭಿವೃದ್ಧಿ ವರದಿ ಪ್ರಕಟಣೆಯೊಂದಿಗೆ ಪ್ರಾರಂಬಿಸಿದವು. ಇದು ಇಡಿ ಜಗತ್ತಿನಲ್ಲಿಯೇ ರಾಜ್ಯ ಮಟ್ಟದ ಪ್ರಪ್ರಥಮ ಮಾನ ವ ಅಭಿವೃದ್ಧಿ ವರದಿಯಾಗಿದೆ. ಇದೇ ರಾಜ್ಯದ ಎರಡನೆಯ ವರದಿ 1998 ರಲ್ಲಿ ಹಾಗೂ ಮೂರನೇ ವರದಿ 2002 ರಲ್ಲಿ ಪ್ರಕಟಗೊಂಡವು. ಕರ್ನಾಟಕವು ರಾಜ್ಯ ಮಟ್ಟದ ಮಾನವ ಅಭಿವೃದ್ಧಿ ವರದಿಯನ್ನು ಪ್ರಕಟಿಸುವಲ್ಲಿ ದ್ವಿತಿಯ ರಾಜ್ಯವೆನಿಸಿಕೊಂಡಿದ್ದು, ಅದರ ಪ್ರಥಮ ವರದಿ 1999 ರಲ್ಲಿ ಹಾಗೂ ಎರಡನೆ ವರದಿ 2005 ರಲ್ಲಿ ಪ್ರಕಟಗೊಂಡಿದೆ.

## ಜಿಲ್ಲಾ ಮಾನವ ಅಭಿವೃದ್ಧಿ ವರದಿ:

ಕರ್ನಾಟಕ ಸರ್ಕಾರ 2008 ರಲ್ಲಿ ವಿಜಯಪುರ, ಕಲಬುರಗಿ, ಮೈಸೂರು ಹಾಗೂ ಉಡುಪಿ ಈ ನಾಲ್ಕು ಜಿಲ್ಲೆಗಳ ಜಿಲ್ಲಾ ಮಾನವ ಅಭಿವೃದ್ಧಿ ವರದಿಗಳನ್ನು ಪ್ರಥಮ ಹಂತದಲ್ಲಿ ಪ್ರಕಟಿಸಿದೆ. ಜಿಲ್ಲಾ ಮಟ್ಟದಲ್ಲಿ ಮಾನವ ಅಭಿವೃದ್ಧಿಯ ಸ್ಥಿತಿಗತಿಗಳ ಅಂಶವನ್ನು ಗುರುತಿಸುವುದು ಮತ್ತು ರಾಜ್ಯದ ಸಮಗ್ರ ಅಭಿವೃಧಿ ದೃಷ್ಟಿಯಿಂದ ಸೂಕ್ತ ಕಾರ್ಯಯೋಜನೆಗಳನ್ನು ರೂಪಿಸುವುದು ಮತ್ತು ಇಲಾಖಾ ನೀತಿಗಳ ಬಲಗಳನ್ನು ಮತ್ತು ನ್ಯೂನತೆಗಳನ್ನು ವಿಮರ್ಶಿಸುವುದು ಈ ವರದಿಗಳ ಹಿಂದಿರುವ ಉದ್ದೇಶವಾಗಿತ್ತು.

ಆದ್ದರಿಂದ, ಕರ್ನಾಟಕ ಸರಕಾರವು ಜಿಲ್ಲಾ ಮಾನವ ಅಭಿವೃದ್ಧಿ ವರದಿಗಳು ಹೆಚ್ಚು ಧೋರಣಾತ್ಮಕವಾಗಿಸಲು ಹಾಗೂ ಸರಕಾರದ ಸಂಪನ್ಮೂಲದ ಸೂಕ್ತ ಹಂಚಿಕೆ ಹಾಗೂ ಪ್ರಾಶಸ್ತ್ಯದ ಕ್ಷೇತ್ರಗಳನ್ನು ಗುರುತಿಸಲು ಉಪಯೋಗವಾಗಬೇಕೆಂಬ ಉದ್ದೇಶದಿಂದ ರಾಜ್ಯದ ಎಲ್ಲಾ 30 ಜಿಲ್ಲೆಗಳ 'ಜಿಲ್ಲಾ ಮಾನವ ಅಭಿವೃದ್ಧಿ' ವರದಿಗಳನ್ನು 2011-12 ನೇ ಸಾಲಿಗಾಗಿ ತಯಾರಿಸಬೇಕೆಂದು ನಿರ್ಧರಿಸಿತು. ಈ ಜಿಲ್ಲಾ ಮಾನವ ಅಭಿವೃದ್ಧಿ ವರದಿಗಳ ವಿಶೇಷ ಲಕ್ಷಣವೆಂದರೆ ಮಾನವ ಅಭಿವೃದ್ಧಿ ಪರಿಕಲ್ಪನೆಯನ್ನು ಬಹಳ ವಿಸ್ತೃತವಾಗಿ ಪರಿಭಾವಿಸಲಾಗಿದೆ. ಸೂಚ್ಯಂಕಗಳನ್ನು ಲೆಕ್ಕ ಹಾಕುವ ವಿಧಾನಗಳನ್ನು ಏಕರೂಪಗೊಳಿಸಲಾಗಿದೆ.

## ಗ್ರಾಮ ಪಂಚಾಯತಿ ಮಾನವ ಅಭಿವೃದ್ಧಿ ಸೂಚ್ಯಂಕ:

ಗ್ರಾಮ ಪಂಚಾಯತಿ ಮಟ್ಟದಲ್ಲಿ ಮಾನವ ಅಭಿವೃದ್ಧಿ ಸೂಚ್ಯಂಕವನ್ನು ಸಿದ್ದಪಡಿಸುವುದು ಕೆಳಹಂತದಲ್ಲಿ ಮಾನವ ಅಭಿವೃದ್ಧಿಗೆ ಸೂಕ್ತ ಮಾರ್ಗಸೂಚಿಗಳನ್ನು ಸಿದ್ದಪಡಿಸುವ ನಿಟ್ಟಿನಲ್ಲಿ ಬಹಳ ಉತ್ತಮವಾದ ಪ್ರಕ್ರಿಯೆಯಾಗಿರುತ್ತದೆ. ರಾಷ್ಟ್ರದಲ್ಲೇ ಮೊಟ್ಟಮೊದಲ ಬಾರಿಗೆ ಕರ್ನಾಟಕ ರಾಜ್ಯದಲ್ಲಿ ಗ್ರಾಮ ಪಂಚಾಯತಿ ಮಾನವ ಅಭಿವೃದ್ಧಿ ಸೂಚ್ಯಂಕವನ್ನು ಸಿದ್ಧಪಡಿಸುವ ನಿಟ್ಟಿನಲ್ಲಿ ಕಾರ್ಯೋನ್ಮುಖವಾಗಿದೆ.

## ಗ್ರಾಮ ಪಂಚಾಯತಿ ಮಾನವ ಅಭಿವೃದ್ಧಿ ಸೂಚ್ಯಂಕದ ವಿಶ್ಲೇಷಣೆ

ರಾಜ್ಯದಲ್ಲಿ ಅಂಕಿಅಂಶಗಳು ಲಭ್ಯವಿದ್ದ 5898 ಗ್ರಾಮ ಪಂಚಾಯತಿಗಳ ಮಾನವ ಅಭಿವೃದ್ಧಿ ಸೂಚ್ಯಂಕವನ್ನು ವಿಶ್ಲೇಷಿಸಿದಾಗ ಸುಮಾರು ಅರ್ಧದಷ್ಟು ಗ್ರಾಮ ಪಂಚಾಯತಿಗಳು ರಾಜ್ಯ ಮಟ್ಟದ ಸರಾಸರಿ ಮಾನವ ಅಭಿವೃದ್ಧಿ ಸೂಚ್ಯಂಕವಾದ 0.4392 ಕ್ಕಿಂತ ಸಾಧನೆ ಮಾಡಿದ್ದು, ಉಳಿದ ಅರ್ಧದಷ್ಟು ಗ್ರಾಮ ಪಂಚಾಯತಿಗಳು ಸಾಧನೆ ಅದಕ್ಕಿಂತ ಕಡಿಮೆ ಇರುವುದು ಕಂಡು ಬರುತ್ತದೆ. ಬೆಂಗಳೂರು ನಗರ, ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿರುವ ಎಲ್ಲಾ ಗ್ರಾಮ ಪಂಚಾಯತಿಗಳು ರಾಜ್ಯ ಮಟ್ಟದ ಸರಾಸರಿಗಿಂತ ಹೆಚ್ಚಿನ ಸಾಧನೆಯನ್ನು ಮಾನವ ಅಭಿವೃದ್ಧಿಯಲ್ಲಿ ಮಾಡಿರುತ್ತದೆ. ರಾಜ್ಯದಲ್ಲಿ ಯಾದಗೀರ್ ಜಿಲ್ಲೆಯಲ್ಲಿ ಮಾತ್ರ ಎಲ್ಲಾ ಗ್ರಾಮ ಪಂಚಾಯತಿಗಳ ಸಾಧನೆ ರಾಜ್ಯ ಮಟ್ಟದ ಸರಾಸರಿಗಿಂತ ಕಡಿಮೆ ಇರುವುದು ಕಂಡು ಬಂದಿರುತ್ತದೆ. ಇದೇ ರೀತಿ ಬಾಗಲಕೋಟೆ, ಬೀದರ್, ಗದಗ, ಕಲಬುರಗಿ, ವಿಜಯಾಪುರ ಜಿಲ್ಲೆಗಳಲ್ಲಿ ಶೇಕಡ 90ಕ್ಕಿಂತ ಹೆಚ್ಚಿನ ಸಂಖ್ಯೆಯ ಗ್ರಾಮ ಪಂಚಾಯತಿಗಳು ಮಾನವ ಅಭಿವೃದ್ಧಿಯ ಸಾಧನೆಯಲ್ಲಿ ರಾಜ್ಯ ಮಟ್ಟದ ಸರಾಸರಿಗಿಂತ ಹಿಂದುಳಿದಿರುವುದು ಕಂಡು ಬರುತ್ತದೆ.

ತಲಾ ಆದಾಯದಿಂದ ಅಳೆಯಲ್ಪಡುವ ಆರ್ಥಿಕ ಬೆಳವಣಿಗೆಯು ಜನರ ಜೀವನದ ಗುಣಮಟ್ಟ ಅಥವಾ ಅವರ ಯೋಗಕ್ಷೇಮದ ಮಟ್ಟವನ್ನು ಅಳೆಯಲು ಅಸಮರ್ಪಕವೆಂದು ತಿಳಿಯಲಾಗಿದೆ. ಮಾನವ ಅಭಿವೃದ್ಧಿಯು ಆರ್ಥಿಕ ಬೆಳವಣಿಗೆ ಅಥವಾ ಆದಾಯದ ಬೆಳವಣಿಗೆಗಿಂತಲೂ ವಿಶಾಲವಾದ ದೃಷ್ಟಿಕೋನವನ್ನು ಹೊಂದಿದೆ. ಮಾನವ ಅಭಿವೃದ್ಧಿಗೆ ಪ್ರಮುಖವಾಗಿ ಜನರ ಆಯ್ಕೆಗಳನ್ನು ವಿಸ್ತರಿಸುವುದು ಮತ್ತು ಅವುಗಳನ್ನು ಅನುಭವಿಸುವ ಸ್ವಾತಂತ್ರ್ಯ ಮತ್ತು ಸಾಮರ್ಥ್ಯಗಳನ್ನು ಹೆಚ್ಚಿಸುವುದಾಗಿದೆ. ಪ್ರಮುಖವಾದ ಆಯ್ಕೆಗಳೆಂದರೆ ದೀರ್ಘ ಹಾಗೂ ಆರೋಗ್ಯಪೂರ್ಣ ಜೀವನವನ್ನು ನಡೆಸುವುದು. ಜ್ಞಾನವಂತನಾಗುವುದು ಮತ್ತು ಗೌರವಯುತ ಜೀವನಕ್ಕೆ ಬೇಕಾದ ಸಂಪನ್ಮೂಲಗಳನ್ನು ಪಡೆಯುವುದು ಮತ್ತು ಸಮುದಾಯದ ಜೀವನದಲ್ಲಿ ಸಕ್ರಿಯವಾಗಿ ಭಾಗವಹಿಸುವುದು ಹಾಗೂ ತಮ್ಮ ಜೀವನದ ಮೇಲೆ ಪರಿಣಾಮ ಬೀರುವ ವಿಷಯಗಳ ನಿರ್ಣಯದಲ್ಲಿ ಪಾಲ್ಗೊಳ್ಳುವುದು. ಈ ಆಯ್ಕೆಗಳನ್ನು ಪಡೆಯುವ ಸಾಮರ್ಥ್ಯಗಳಿಲ್ಲದಿದ್ದರೆ ಜನರಿಗೆ ಇನ್ನಿತರ ಆಯ್ಕೆಗಳು ಲಭ್ಯವಾಗುವುದಿಲ್ಲ. ಅನೇಕ ಅವಕಾಶಗಳು ದೊರೆಯದೇ ಹೋಗಬಹುದು. ಆದ್ದರಿಂದ, ಮಾನವ ಅಭಿವೃದ್ಧಿ ಸೂಚ್ಯಂಕವು ಅಭಿವೃದ್ಧಿಯ ಈ ಎಲ್ಲಾ ಆಯಾಮಗಳನ್ನು ಒಳಗೊಳ್ಳುತ್ತದೆ ಮತ್ತು ಜನರ ಜೀವನದ ಗುಣಮಟ್ಟ ಅಥವಾ ಮಾನವ ಜೀವನ ಸಮೃದ್ಧಿಯನ್ನು ಅಳೆಯಲು ಇದೊಂದು ಸೂಕ್ತವಾದ ಅಳತೆಗೋಲು ಎಂದು ಪರಿಗಣಿಸಲ್ಪಟ್ಟಿದೆ.

ಮಾನವ ಅಭಿವೃದ್ಧಿಯ ವಿವಿಧ ಕ್ಷೇತ್ರಗಳಾದ ಶಿಕ್ಷಣ, ಆರೋಗ್ಯ, ಜೀವನಾಧಾರ, ಜೀವನಮಟ್ಟ, ಮಕ್ಕಳ ಅಭಿವೃದ್ಧಿ, ಲಿಂಗ ಸಮಾನತೆ, ಆಹಾರ ಭದ್ರತೆ, ಮೂಲಕ ಸೌಕರ್ಯಗಳ ಅಭಿವೃದ್ಧಿ, ನಗರಾಭಿವೃದ್ಧಿ ಮುಂತಾದ

ಕ್ಷೇತ್ರಗಳಲ್ಲಿ ಜಿಲ್ಲಾ ಅಥವ ತಾಲ್ಲೂಕು ಮಟ್ಟಗಳಲ್ಲಿ ಸಾಧಿಸಿದ ಪ್ರಗತಿಯನ್ನು ಅಳತೆ ಮಾಡಲು ಇದು ಒಂದು ಉಪಯುಕ್ತವಾದ ವರದಿಯಾಗಿದೆ. ಜಿಲ್ಲಾ ಮಟ್ಟದಲ್ಲಿ ಯೋಜನೆಗಳನ್ನು ರಚಿಸುವಲ್ಲಿ ಹಾಗೂ ಅವುಗಳ ಪರಿಣಾಮಕಾರಿಯಾಗಿ ಜಾರಿಗೆ ತರುವಲ್ಲಿ ಇದು ಬಹಳಷ್ಟು ಉಪಯುಕ್ತವಾದ ದಾಖಲೆಯಾಗಿದೆ. ಜಿಲ್ಲೆಗಳಲ್ಲಿನ ವಿವಿಧ ತಾಲ್ಲೂಕುಗಳ ಅಭಿವೃದ್ಧಿಗಾಗಿ ಅನುಷ್ಠಾನಗೊಳಿಸಲ್ಪಟ್ಟ ಮತ್ತು ಅನುಷ್ಠಾನಗೊಳಿಸಲ್ಪಡುವ ಹಲವಾರು ನೂತನ ಯೋಜನೆಗಳಿಗೆ ಸೂಕ್ತವಾದ ಸಂಪನ್ಮೂಲಗಳ ಹಂಚಿಕೆಯಲ್ಲಿ ಇದು ದೃಢವಾದ ಆಧಾರವನ್ನು ಒದಗಿಸುತ್ತದೆ.

ಗ್ರಾಮ ಪಂಚಾಯತಿ ಮಟ್ಟದ ಮಾನವ ಅಭಿವೃದ್ಧಿ ಸೂಚ್ಯಂಕಗಳು ಜೀವನದ ಗುಣಮಟ್ಟ, ಆರೋಗ್ಯ ಮತ್ತು ಶಿಕ್ಷಣ ಕ್ಷೇತ್ರದಲ್ಲಿ ಪಂಚಾಯತಿಗಳು ಸಾಧಿಸಿರುವ ಪ್ರಗತಿಯನ್ನು ಸೂಚಿಸುತ್ತದೆ. ಈ ಪ್ರಕ್ರಿಯೆ ಚಾಲ್ತಿಯಲ್ಲಿರುವ ಕಾರ್ಯಕ್ರಮಗಳಲ್ಲಿ ಸಾಕಷ್ಟು ಬದಲಾವಣೆಗಳನ್ನು ತರುವುದು ಮತ್ತು ಹೊಸದಾದ ಅಭಿವೃದ್ಧಿ ಕಾರ್ಯಕ್ರಮಗಳನ್ನು ಗ್ರಾಮ ಪಂಚಾಯತಿಗಳು ಕಂಡು ಬರುವ ಕೊರತೆಗಳ ಆಧಾರದ ಮೇಲೆ ಆಯಾ ಕ್ಷೇತ್ರಗಳಲ್ಲಿ ಹಮ್ಮಿಕೊಳ್ಳಲು ಸಾಧ್ಯವಾಗುತ್ತದೆ. ನೀತಿ ನಿರೂಪಣೆ ಮಾಡುವವರು, ಆಭಿವೃದ್ಧಿಯಲ್ಲಿ ನಿರತವಾಗಿರುವವರು ಸೂಚ್ಯಂಕಗಳನ್ನು ಬಳಸಿಕೊಂಡು ಮಾನವ ಅಭಿವೃದ್ಧಿಗೆ ಸೂಕ್ತವಾದ ನೀತಿ ನಿರೂಪಿಸುವಲ್ಲಿ ಈ ವರದಿ ಸಹಾಯವಾಗುತ್ತದೆ.

ಬಾಬು:ಜಿಪಿಆರ್.